ಅಧ್ಯಕ್ಷರು:– ಈ ನಿರ್ಣಯವನ್ನು ಅಭಿನಂದಿತ ಗಣ್ಯರಿಗೆ ಕಳುಹಿಸಿಕೊಡಲಾಗುವುದು.

2.ಸಂತಾಪ ಸೂಚನೆ

ಸಭಾಧ್ಯಕ್ಷರು: ಈಗ ಸಂತಾಪ ಸೂಚನೆ

ರಾಜ್ಯದ ಮಾಜಿ ಸಚಿವರುಗಳಾಗಿದ್ದ ಹೆಚ್.ಶಿವಪ್ಪ, ಕೆ ಯಂಕಟಪ್ಪ ಮತ್ತು ಮಹಾದೇವಪ್ಪ ಶಿವಪ್ಪ ಕಟಗಿ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ.ಬಿ. ಪುಟ್ಟಕಾಮಯ್ಯ, ಆರ್.ಕೆ.ರಾಥೋಡ್, ಎಲ್.ಕೆ ಚವ್ಹಾಣ ಮತ್ತು ಖ್ಯಾತ ಹಿನ್ನೆಲೆ ಗಾಯಕ ಡಾ. ಮನ್ನಾ ಡೇ ಹಾಗೂ ಚಲನಚಿತ್ರ ನಿರ್ದೇಶಕ ಡಿ.ರಾಜೇಂದ್ರಬಾಬು ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ

1. ಹೆಚ್.ಶಿವಪ್ಪ

ಹೆಚ್.ಶಿವಪ್ಪ ಅವರು ದಿನಾಂಕ: 1ನೇ ಏಪ್ರಿಲ್, 1937ರಂದು ಹರಿಹರ ತಾಲ್ಲೂಕು ಬನ್ನಿಕೋಡ್ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾದಿ ಮತ್ತು ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. 1974 ರಿಂದ 1980 ರವರೆಗೆ ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆಯ ಉಪಾಧ್ಯಕ್ಷರಾಗಿ ಮತ್ತು 1980 ರಿಂದ 2005ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 1980ರಲ್ಲಿ ಹರಿಹರ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಚುನಾಯಿತರಾಗಿದ್ದರಲ್ಲದೆ 1994ರಲ್ಲಿ ಹತ್ತನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ದಿವಂಗತರು ದಿನಾಂಕ:14.06.1998 ರಿಂದ 01.03.1999 ರವರೆಗೆ ಭಾರಿ ಮತ್ತು ಮಧ್ಯಮ ಕೈಗಾರಿಕೆ ರಾಜ್ಯ ಸಚಿವರಾಗಿ ಮತ್ತು 02.03.1999 ರಿಂದ 10.10.1999 ರವರೆಗೆ ಸಕ್ಕರೆ ಖಾತೆಯ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಹೆಚ್.ಶಿವಪ್ಪ ಅವರು ದಿನಾಂಕ·05.08.2013 ರಂದು ನಿಧನ ಹೊಂದಿರುತ್ತಾರೆ.

2. ಕೆ.ಯಂಕಟಪ್ಪ

ಕೆ ಯಂಕಟಪ್ಪ ಅವರು ದಿನಾಂಕ 05ನೇ ಸೆಪ್ಟೆಂಬರ್ 1939 ರಂದು ಶಿವಮೊಗ್ಗ ಜಿಲ್ಲೆಯ ಚುರ್ಚಿಗುಂಡಿಯ ರೈತ ಕುಟುಂಬದಲ್ಲಿ ಜನಿಸಿದ್ದು, ಡಿಪ್ಲೊಮವರೆಗೆ ವ್ಯಾಸಂಗ ಮಾಡಿ ವಿಜಾಪುರ ಮತ್ತು ಬೆಂಗಳೂರಿನ ತಾಂತ್ರಿಕ ಕಾಲೇಜಿನಲ್ಲಿ ಸಹಾಯಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುತ್ತಾರಲ್ಲದೆ, ಬಡವರ ಏಳಿಗೆಗಾಗಿ ಶ್ರಮಿಸಿದವರಾಗಿರುತ್ತಾರೆ.

1971ರಲ್ಲಿ ಉಪನ್ಯಾಸಕ ಹುದ್ದೆಯನ್ನು ತ್ಯಜಿಸಿ ಕಾಂಗ್ರೆಸ್(ಆರ್) ಪಕ್ಷವನ್ನು ಸೇರುವುದರ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿರು ತ್ತಾರೆ.

ದಿವಂಗತರು 1972ರಲ್ಲಿ ಐದನೇ ವಿಧಾನಸಭೆಗೆ ಮತ್ತು 1978ರಲ್ಲಿ ಆರನೇ ವಿಧಾನಸಭೆಗೆ ಶಿಕಾರಿಪುರ ಕ್ಷೇತ್ರದಿಂದ ಆಯ್ಕೆಗೊಂಡು ಕಾರ್ಯನಿರ್ವ ಹಿಸಿರುತ್ತಾರೆ. ಅಲ್ಲದೆ 1980 ರಿಂದ 1983ರವರೆಗೆ ತೋಟಗಾರಿಕೆ ಮತ್ತು ಬಂದಿಖಾನೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಕೆ.ಯಂಕಟಪ್ಪ ಅವರು ದಿನಾಂಕ:16.08.2013ರಂದು ನಿಧನ ಹೊಂದಿರುತ್ತಾರೆ

3. ಮಹದೇವಪ್ಪ ಶಿವಪ್ಪ ಕಟಗಿ

ಮಹದೇವಪ್ಪ ಶಿವಪ್ಪ ಕಟಗಿ ಅವರು ದಿನಾಂಕ 13ನೇ ಸೆಪ್ಟೆಂಬರ್ 1928ರಂದು ಕುಂದಗೋಳದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ದಿವಂಗತರು ವೃತ್ತಿಯಲ್ಲಿ ಸರ್ಕಾರಿ ಅಭಿಯೋಜಕರಾಗಿದ್ದರು ಮತ್ತು ಪ್ರವೃತ್ತಿಯಲ್ಲಿ ಕೃಷಿಕರು ಹಾಗೂ ಕುಸ್ತಿ ಪಟುವಾಗಿದ್ದರು. ಕುಂದಗೋಳ ಸಹಕಾರ ಸಂಘದ ಸಂಧಾನಾಧಿಕಾಯಾಗಿ ಸಮಾಜವಾದಿ ಯುವಕರುಗಳ ಸಂಘಟಕರಾಗಿ ಶ್ರಮಿಸಿರುತ್ತಾರೆ.

ದಿವಂಗತರು 1978ರಲ್ಲಿ ಕುಂದಗೋಳ ಕ್ಷೇತ್ರದಿಂದ ಆರನೇ ವಿಧಾನ ಸಭೆಗೆ ಆಯ್ಕೆಗಾಗಿ ದಿನಾಂಕ 23.10 1979 ರಿಂದ 24.02 1980ರವರೆಗೆ ಆಹಾರ ಮತ್ತು ನಾಗರೀಕ ಪೂರೈಕೆ ಖಾತೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿರು ತ್ತಾರೆ.

ಅಲ್ಲದೆ 1998 ರಿಂದ 1994ರವರೆಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಮಹದೇವಪ್ಪ ಶಿವಪ್ಪ ಕಟಗಿ ಅವರು ದಿನಾಂಕ.11.10.2013 ರಂದು ನಿಧನ ಹೊಂದಿರುತ್ತಾರೆ.

4. ಡಾ. ಬಿ. ಪುಟ್ಟಕಾಮಯ್ಯ

ಡಾ. ಬಿ.ಪುಟ್ಟಕಾಮಯ್ಯ ಅವರು 1929ರಲ್ಲಿ ಶಿರಾದಲ್ಲಿ ಜನಿಸಿರುತ್ತಾರೆ. ವೃತ್ತಿಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುವುದರ ಮೂಲಕ ಜನಾನುರಾಗಿಯಾಗಿ ದ್ದರಲ್ಲದೆ ಶಾಸಕರಾಗಿಯೂ ಸಹ ವೈದ್ಯ ವೃತ್ತಿಯನ್ನು ಮುಂದುವರೆಸಿದ್ದರು.

ದಿವಂಗತರು 1972ರಲ್ಲಿ ಐದನೇ ವಿಧಾನಸಭೆಗೆ ಶಿರಾ ಕ್ಷೇತ್ರದಿಂದ ಚುನಾಯಿತರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಡಾ ಬಿ.ಪುಟ್ಟಕಾಮಯ್ಯ ಅವರು ದಿನಾಂಕ:21.10.2013 ರಂದು ನಿಧನ ಹೊಂದಿರುತ್ತಾರೆ.

5.ಆರ್.ಕೆ.ರಾಠೋಡ್

ಆರ್.ಕೆ.ರಾಠೋಡ್ ಅವರು ದಿನಾಂಕ 1ನೇ ಜೂನ್ 1956ರಂದು ವಿಜಾಪುರ ಜಿಲ್ಲೆಯ ಡೊಮನಾಳ ಎಲ್.ಟಿ. ತಾಂಡದಲ್ಲಿ ಜನಿಸಿದ್ದು, ಮಾಧ್ಯ ಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ದಿವಂಗತರು ವೃತ್ತಿಯಲ್ಲಿ ಕೃಷಿಕರಾಗಿ ದ್ದರು.

1997ರಲ್ಲಿ ವಿಜಾಪುರ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಮತ್ತು 2004ರಲ್ಲಿ ಹನ್ನೆರಡನೇ ವಿಧಾನಸಭೆಗೆ ಬಳ್ಳೋಳ್ಳಿ (ಮೀಸಲು) ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಆರ್.ಕೆ ರಾರೋಡ್ ಅವರು ದಿನಾಂಕ:16 11.2013 ರಂದು ನಿಧನ ಹೊಂದಿರುತ್ತಾರೆ.

6 ಎಲ್.ಕೆ ಚವ್ಹಾಣ

ಎಲ್.ಕೆ.ಚವ್ಹಾಣ ಅವರು ದಿನಾಂಕ 1ನೇ ಜೂನ್ 1958 ರಂದು ಜನಿಸಿದ್ದು, ಸ್ನಾತಕೋತ್ತರ ಪದವೀಧರರಾಗಿದ್ದರು. ದಿವಂಗತರು ವೃತ್ತಿಯಲ್ಲಿ ಅಧ್ಯಾಪಕರು ಮತ್ತು ಪ್ರವೃತ್ತಿಯಲ್ಲಿ ಸಮಾಜಸೇವಕರಾಗಿದ್ದರು. ಎಲ್.ಕೆ.ಚವ್ಹಾಣ ಅವರು 1994ರಲ್ಲಿ ಹತ್ತನೇ ವಿಧಾನಸಭೆಗೆ ಹುಲಸೂರು ಮೀಸಲು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಎಲ್.ಕೆ.ಚವ್ಹಾಣ ಅವರು ದಿನಾಂಕ:15.11.2013 ರಂದು ನಿಧನ ಹೊಂದಿರುತ್ತಾರೆ.

7. ಡಾ. ಮನ್ನಾ ಡೇ (ಪ್ರಭೋದ್ ಚಂದ್ರ ಡೇ)

ಡಾ ಮನ್ನಾ ಡೇ ಅವರು 1ನೇ ಮೇ 1919 ರಂದು ಕೋಲ್ಕತ್ತಾದಲ್ಲಿ ಜನಿಸಿರುತ್ತಾರೆ. ಬಾಲ್ಯದಲ್ಲಿಯೇ ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ ಮನ್ನಾ ಡೇ ಅವರು ಪದವಿ ಶಿಕ್ಷಣವನ್ನು ಪೂರೈಸಿದ್ದರು. ಉಸ್ತಾದ್ ದಬೀರ್ ಖಾನ್ ಅವರಿಂದ ಶಾಸ್ತ್ರೀಯ ಸಂಗೀತಾಭ್ಯಾಸ ಮಾಡಿದ ಡೇ ಅವರು 1942ರಲ್ಲಿ ತೆರೆಕಂಡ ತಮನ್ನಾ ಚಿತ್ರದಲ್ಲಿ ಹಿನ್ನೆಲೆ ಗಾಯನ ನೀಡುವುದರ ಮೂಲಕ ಸಂಗೀತ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುತ್ತಾರೆ

ದಿವಂಗತರು ಕನ್ನಡವೂ ಸೇರಿದಂತೆ 12 ಭಾಷೆಗಳಲ್ಲಿ ಒಟ್ಟು 3863 ಗೀತೆಗಳನ್ನು ತಮ್ಮ ಮಧುರ ಕಂಠದಿಂದ ಹಾಡಿ ರಾಷ್ಟ್ರದ್ಯಂತ ಅಪಾರ ಶ್ರೋತೃ ಅಭಿಮಾನಿಗಳನ್ನು ಹೊಂದಿದ್ದರು ಬೆಂಗಳೂರಿನ ಬಗೆಗೆ ದಿವಂಗತರು ವಿಶೇಷ

ಪ್ರೀತಿಯನ್ನು ಹೊಂದಿದ್ದು ಜೀವಿತಾವಧಿ ಇರುವರೆಗೂ ಬೆಂಗಳೂರಿನಲ್ಲಿಯೇ ನೆಲೆಸಿದ್ದರು.

ದಿವಂಗತರಿಗೆ ಶ್ರೇಷ್ಠ ಹಿನ್ನೆಲೆಗಾಯಕ ರಾಷ್ಟ್ರ ಪ್ರಶಸ್ತಿ, ಪದ್ಮಶ್ರೀ ಮತ್ತು ದಾದಾ ಸಾಹೇಬ ಪಾಲ್ಕೆ ಪ್ರಶಸ್ತಿಯಂತಹ ಅತ್ಯಂತ ಶ್ರೇಷ್ಠ ಪ್ರಶಸ್ತಿಗಳು ಅರಸಿ ಬಂದಿದ್ದವು.

ಡಾ. ಮನ್ನಾ ಡೇ ಅವರು ದಿನಾಂಕ:23.10.2013 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿರುತ್ತಾರೆ.

8. ಡಿ.ರಾಜೇಂದ್ರ ಬಾಬು

ಡಿ.ರಾಜೇಂದ್ರಬಾಬು ಅವರು ದಿನಾಂಕ 30ನೇ ಮಾರ್ಚ್ 1951 ರಂದು ಜನಿಸಿದ್ದು. ಬಿ.ಎಸ್.ಸಿ ಪದವೀಧರರಾಗಿದ್ದರು 1980ರ ದಶಕದಲ್ಲಿ "ಕುರುಬನ ಲಕ್ಕ" ಎಂಬ ಚಲನಚಿತ್ರದಲ್ಲಿ ನಾಯಕ ನಟನಾಗಿ ನಟಿಸುವುದರ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದರು. ತದನಂತರ ಚಲನಚಿತ್ರ ರಂಗದಲ್ಲಿ ಸಹಾಯಕ ನಿರ್ದೇಶಕರಾಗಿ ಮತ್ತು ನಿರ್ದೇಶಕರಾಗಿ ಸುಮಾರು 50ಕ್ಕೂ ಹೆಚ್ಚು ಚಲನಚಿತ್ರಗಳನ್ನು ನಿರ್ದೇಶಿಸಿ 'ಕೌಟುಂಬಿಕ ಚಿತ್ರಗಳ ಸರದಾರ' ಎಂದೇ ಖ್ಯಾತಿ ಗಳಿಸಿದ್ದರು.

ದಿವಂಗತರು ಕರ್ನಾಟಕ ಸರ್ಕಾರದಿಂದ "ಜೀವಮಾನ ಸಾಧನೆ ಪ್ರಶಸ್ತಿ" ಮತ್ತು ಶ್ರೇಷ್ಠ ನಿರ್ದೇಶಕ "ಪುಟ್ಟಣ್ಣ ಕಣಗಾಲ್ ಪ್ರಶಸ್ತಿ" ಪುರಸ್ಕೃತರಾಗಿದ್ದರು

ಡಿ.ರಾಜೇಂದ್ರಬಾಬು ಅವರು ದಿನಾಂಕ.03.11.2013 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಕಳೆದ ಅಧಿವೇಶನದಿಂದ ಈ ಅಧಿವೇಶನದ ಅವಧಿಯಲ್ಲಿ ಕೆಲವು ಮಾನ್ಯ ಸದಸ್ಯರು ನಿಧನ ಹೊಂದಿದ್ದಾರೆ.

ಮಾನ್ಯ ಹೆಚ್.ಶಿವಪ್ಪನವರು, ಮಾನ್ಯ ಕೆ.ಯಂಕಟಪ್ಪನವರು, ಮಾನ್ಯ ಮಹಾದೇವಪ್ಪ ಶಿವಪ್ಪ ಕಟಗಿ, ಡಾ ಬಿ.ಪುಟ್ಟಕಾಮಯ್ಯನವರು ಮತ್ತು ಮಾನ್ಯ ಆರ್.ಕೆ ರಾರೋಡ್ ಇವರೆಲ್ಲರೂ ಕೂಡ ಈ ಸದನದ ಸದಸ್ಯರಾಗಿದ್ದಂಥವರು. ಹಾಗೆ ಇತ್ತೀಚೆಗೆ ಭಾರತೀಯ ಚಲನಚಿತ್ರರಂಗದ ಹೆಸರಾಂತ ಹಿನ್ನೆಲೆ ಗಾಯಕ ಡಾ ಮನ್ನಾ ಡೇಯವರು ಕೂಡ ನಿಧನ ಹೊಂದಿದ್ದಾರೆ. ಮತ್ತೆ ಮಾನ್ಯ ಡಿ.ರಾಜೇಂದ್ರಬಾಬುರವರು ನಿರ್ದೇಶಕರಾಗಿದ್ದಂಥವರು ಇವರು ಕೂಡ ನಿಧನ ಹೊಂದಿದ್ದಾರೆ.

ಮಾನ್ಯ ಹೆಚ್ ಶಿವಪ್ಪನವರು ಹರಿಹರ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದಂಥವರು ಇವರು ಮಾನ್ಯ ಜೆ.ಹೆಚ್. ಪಟೇಲ್‌ರವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದಂಥವರು ಮತ್ತು ನಮ್ಮ ಸಹದ್ಯೋಗಿಯಾಗಿದ್ದರು. ಇವರು ಕೈಗಾರಿಕ ಮತ್ತು ಸಕ್ಕರೆ ಇಲಾಖೆಗಳ ಸಚಿವರಾಗಿ ಕೆಲಸ ಮಾಡಿದ್ದರು. ಇದರ ಜೊತೆಗೆ ಸಹಕಾರಿ ಕ್ಷೇತ್ರದಲ್ಲೂ ಕೂಡ ಕೆಲಸ ಮಾಡಿ ಸಹಕಾರಿ ಧುರೀಣರಾಗಿದ್ದರು. ಮತ್ತೆ ಇವರು ವೃತ್ತಿಯಲ್ಲಿ ವಕೀಲರಾಗಿ ಕೂಡ ಕೆಲಸ ಮಾಡಿದ್ದರು. ಇವರು ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ, ಬಹಳ ಸ್ನೇಹಜೀವಿಯಾಗಿದ್ದರು. ಇವರು ಕೃಷಿ ಕುಟುಂಬದಲ್ಲಿ ಜನಿಸಿದಂಥವರು, ಇವರು ಸದನದ ಸದಸ್ಯರಾಗಿ ಮಂತ್ರಿಯಾಗಿ, ಸಮಾಜಕ್ಕೆ ತನ್ನದೇ ಆದಂಥ ಸೇವೆಯನ್ನು ಮಾಡಿದ್ದಾರೆ. ಮಾನ್ಯ ಶಿವಪ್ಪನವರನ್ನು ಸ್ಮರಣೆ ಮಾಡಿಕೊಳ್ಳುತ್ತಾ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ನಾನು ಪ್ರಾರ್ಥನೆ ಮಾಡುತ್ತೇನೆ

ಮಾನ್ಯ ಕೆ.ಯಂಕಟಪ್ಪನವರು 5 ಮತ್ತು 6ನೇ ವಿಧಾನಸಭೆಗೆ ಶಿಕಾರಿಪುರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಇವರು ಒಮ್ಮೆ ಮಂತ್ರಿಗಳು ಆಗಿದ್ದರು, ಇವರು ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರಾಗಿದ್ದರು. ಇವರು ಸಹ ರೈತ ಕುಟುಂಬದಿಂದ ಬಂದಿದ್ದರು, ಇವರು ಪರಿಶಿಷ್ಟ ಜಾತಿಗೆ ಸೇರಿದ್ದರೂ ಕೂಡ ಸಾಮಾನ್ಯ ಕ್ಷೇತ್ರದಿಂದ ಗೆದ್ದು ಬಂದಿದ್ದರು. ತಮ್ಮ ಕಾಲದಲ್ಲಿ ಇವರು ಬಹಳ ಜನಪ್ರಿಯ ವ್ಯಕ್ತಿಯಾಗಿದ್ದರು. ಇವರು ಇವತ್ತು

ನಮ್ಮನ್ನು ಅಗಲಿದ್ದಾರೆ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಮಹದೇವಪ್ಪ ಶಿವಪ್ಪ ಕಟಗಿಯವರು ಕುಂದಗೋಳ ವಿಧಾನ ಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವರಾಗಿ ಕೆಲಸ ಮಾಡಿದ್ದರು, ಮತ್ತೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಒಮ್ಮೆ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು ಇವರು ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಈ ಎರಡೂ ಸದನಗಳಲ್ಲೂ ಕೆಲಸ ಮಾಡಿ, ಜನಪ್ರಿಯ ವ್ಯಕ್ತಿಯಾಗಿದ್ದರು. ಇವರು ಸಮಾಜ ಮುಖಿಯಾಗಿ ಕೆಲಸ ಮಾಡುತ್ತಿದ್ದರು, ಬಹಳ ಮುಖ್ಯವಾಗಿ ಉತ್ತಮ ಕುಸ್ತಿಪಟುವಾಗಿದ್ದರೆಂಬುದು ಬಹಳ ಉಲ್ಲೇಖನೀಯವೆನ್ನುವ ಮಾತನ್ನು ತಿಳಿಸುತ್ತಾ, ಇವರ ಆತ್ಮಕ್ಕೂ ಕೂಡ ಶಾಂತಿ ದೊರೆಯಲೆಂದು ನಾನು ಪ್ರಾರ್ಥನೆ ಮಾಡುತ್ತೇನೆ

ಡಾ:ಬಿ.ಪುಟ್ಟಕಾಮಯ್ಯನವರು 5ನೇ ವಿಧಾನಸಭೆಗೆ ಶಿರಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು ಇವರು ವೃತ್ತಿಯಲ್ಲಿ ವೈದ್ಯರಾಗಿದ್ದರು. ವಿಧಾನ ಸಭೆಯ ಸದಸ್ಯರಾಗಿದ್ದರೂ ಕೂಡ, ವೈದ್ಯ ವೃತ್ತಿಯನ್ನು ಮುಂದುವರೆಸುತ್ತಾ, ಜನರ ಮನ್ನಣೆ ಮತ್ತು ಪ್ರೀತಿಯನ್ನು ಗಳಿಸಿದ್ದರೆನ್ನುವುದನ್ನು ಇವತ್ತು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಇವರ ಈ ಸೇವೆಯನ್ನು ಸ್ಮರಿಸಿಕೊಳ್ಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಆರ್.ಕೆ.ರಾಥೋಡ್‌ರವರು ಬಳ್ಳೋಳ್ಳಿ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದಂಥವರು. ಇವರು 1997ರಲ್ಲಿ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ ರಾಗಿಯೂ ಕೂಡ ಕೆಲಸವನ್ನು ಮಾಡಿದ್ದರು. ಅವರು ಪ್ರಜಾಪ್ರಭುತ್ವದಲ್ಲಿ ಕೆಳಮಟ್ಟದ ಚುನಾಯಿತ ಸಂಸ್ಥೆಗಳು ಏನಿವೆ, ಅಲ್ಲಿಯೂ ಕೂಡ ಕೆಲಸ ಮಾಡಿ ಅಪಾರವಾದಂಥ ಅನುಭವ ಪಡೆದುಕೊಂಡಿದ್ದರು.ಅವರು ಶಾಸಕರಾಗಿಯೂ ಕೂಡ ಕೆಲಸ ಮಾಡಿದ್ದಾರೆ. ಅವರನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿ ಕೊಳ್ಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಡಾ.ಮನ್ನಾ ಡೇಯವರು ಇತ್ತೀಚೆಗೆ ನಿಧನವಾಗಿದ್ದಾರೆ ಇವರು ಮೂಲತಃ ಪಶ್ಚಿಮ ಬಂಗಾಳದವರಾಗಿದ್ದು, ಭಾರತೀಯ ಚಲನಚಿತ್ರ ರಂಗ ಕಂಡಂಥ ಅತ್ಯಂತ ಸುಪ್ರಸಿದ್ಧ ಹಿನ್ನೆಲೆ ಗಾಯಕರಾಗಿದ್ದರು ಸುಮಾರು 70 ವರ್ಷಗಳು ದೀರ್ಘ ಕಾಲ ಹಿನ್ನೆಲೆ ಗಾಯಕರಾಗಿ ಸುಮಾರು 3,500 ಹಾಡುಗಳನ್ನು ಹಾಡಿ ದಾಖಲೆಗಳನ್ನು ನಿರ್ಮಾಣ ಮಾಡಿದರು. ಇವರು ಬರೀ ಹಿಂದಿ ಭಾಷೆಯ ಹಾಡುಗಳನ್ನಷ್ಟೇ ಹಾಡಲಿಲ್ಲ, ಭಾರತೀಯ ಭಾಷೆಗಳಾದಂಥ 7 ಭಾಷೆಗಳಲ್ಲಿ ಹಿನ್ನೆಲೆ ಗಾಯಕರಾಗಿಹಾಡುಗಳನ್ನು ಹಾಡಿದ್ದಾರೆ. ಇದರ ಜೊತೆಗೆ ಕನ್ನಡ ಭಾಷೆಯ ಹಾಡುಗಳನ್ನು ಹಾಡಿದರೆನ್ನುವಂಥದ್ದು, ನಾವೆಲ್ಲರೂ ಹೆಮ್ಮೆ ಪಡುವಂಥ ವಿಚಾರವಾಗಿದೆ. ಆ ಕಾಲದಲ್ಲಿ ಹಿಂದಿ ಚಲನಚಿತ್ರರಂಗದಲ್ಲಿ ಮಹಮ್ಮದ್ ರಫಿ, ಮುಖೇಶ್ ಮತ್ತು ಕಿಶೋರ್ ಕುಮಾರ್ ಇವರೆಲ್ಲಾ ಪ್ರಸಿದ್ಧ ಹಿನ್ನೆಲೆ ಗಾಯಕರಾಗಿದ್ದಂಥವರು. ಆ ಕಾಲದಲ್ಲಿ ಇವರು ಬಹಳ ಹೆಸರನ್ನು ಗಳಿಸಿದಂಥವರು. ನಾವೆಲ್ಲಾ ಹುಡುಗರಾಗಿದ್ದಾಗ ಇವರ ಹಾಡುಗಳನ್ನು ಕೇಳುವುದಕ್ಕೆ ಕಾಫಿ ಬಾರ್‌ಗಳಿಗೆ ಹೋಗುತ್ತಿದ್ದೆವು. ಇವರು ಅಷ್ಟೊಂದು ಜನರ ಮನಸ್ಸನ್ನು ಪ್ರೀತಿಯನ್ನು ಗಳಿಸಿದ್ದರು. ನಾವು ಇವತ್ತು ಇವರ ಕಂಠ ಸಿರಿ ಮತ್ತು ಮಾಧುರ್ಯತೆ ಬಹುಶಃ ಎಲ್ಲರೂ ಕೂಡ ಇಷ್ಟ ಪಟ್ಟಿದ್ದರೆನ್ನುವುದನ್ನು ನೋಡಬೇಕಾಗುತ್ತದೆ. ಇವರ ಹಾಡುಗಳನ್ನು ಕೇಳಿ ಬಹಳ ಜನರು ಆನಂದಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಡಾ.ಮನ್ನಾ ಡೇಯವರ ಹೆಸರು ಪ್ರಭೋದ್ ಚಂದ್ರ ಡೇ ಎಂದು ಇದ್ದು, ನಂತರ ಮನ್ನಾ ಡೇ ಎಂದು ಖ್ಯಾತರಾದರು. ಇವರು ಜೀವನ ಬಾಂಬೆಯಲ್ಲಿ ಕಂಡು ಕೊಂಡಿದ್ದು, ಇವರು ಬಹಳ ವರ್ಷಗಳು ಬಾಂಬೆಯಲ್ಲಿದ್ದರು. ಅನಂತರ 8–10 ವರ್ಷಗಳು ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ವಾಸವಾಗಿದ್ದರು, ಇಲ್ಲೇ ನಿಧನ ಹೊಂದಿದರು. ಹಾಗಾಗಿ ಇವರು ಕನ್ನಡಿಗರೇ ಆಗಿದ್ದರೆನ್ನುವಂಥದ್ದನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಮತ್ತೆ ರಾಜ್ಯ ಸರ್ಕಾರ ನಾಡ ನಮನ ಕಾರ್ಯಕ್ರಮವನ್ನು ಮಾಡಿ, ಅವರಿಗೆ ಗೌರವವನ್ನು ಸಲ್ಲಿಸುವಂಥ ಕೆಲಸವನ್ನು ಸರ್ಕಾರ ಮಾಡಿದೆಯೆಂಬ ವಿಷಯವನ್ನು ಈ ಸಂದರ್ಭದಲ್ಲಿ ಸನದದ ಗಮನಕ್ಕೆ ತರುತ್ತೇನೆ. ಡಾ: ಮನ್ನಾ ಡೇರವರು ಇಡೀ ಚಲನಚಿತ್ರ ರಂಗ ಕ್ಷೇತ್ರದಲ್ಲಿ ತಮ್ಮದೇ ಆದಂಥ ಛಾಪನ್ನು

ಮೂಡಿಸಿ ಹೋಗಿದ್ದಾರೆ. ಅವರು ಬಹಳ ಎತ್ತರಕ್ಕೆ ಹೋಗಿದ್ದಂಥವರು, ಇವರಿಗೆ ಪದ್ಮಭೂಷಣ ಪ್ರಶಸ್ತಿ ಕೂಡ ಸಿಕ್ಕಿತ್ತು. ಇವತ್ತು ಇಂಥ ಒಬ್ಬ ಮಹಾನ್ ಗಾಯಕ ನಮ್ಮನ್ನು ಅಗಲಿದ್ದಾರೆ. ಆದರೆ ಅವರು ಸದಾ ಜನರ ಮನಸ್ಸಿನಲ್ಲಿ ಅಮರರಾಗಿದ್ದಾರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವರನ್ನು ಅಮರ ಗಾಯಕರೆಂದು ಕರೆಯುತ್ತಾರೆ. ಇವರು ನಮ್ಮನ್ನು ಅಗಲಿದ್ದಾರೆ. ಇವರ ಆತ್ಮಕ್ಕೂ ಕೂಡ ಚಿರಶಾಂತಿ ದೊರೆಯಲೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಡಿ.ರಾಜೇಂದ್ರಬಾಬುರವರು ನಟರೂ ಆಗಿದ್ದರು, ನಿರ್ದೇಶಕರೂ ಆಗಿದ್ದರು. ಇವರು ಅನೇಕ ಚಲನಚಿತ್ರಗಳನ್ನು ನಿರ್ದೇಶನ ಮಾಡಿದ್ದರು ಕೌಟುಂಬಿಕ ಚಿತ್ರಗಳಲ್ಲಿ ವಿಶೇಷ ತರಬೇತಿಯನ್ನು ಪಡೆದುಕೊಂಡಿದ್ದರು ಅವರಿಗೆ ರಾಜ್ಯ ಸರ್ಕಾರ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ಕೂಡ ಕೊಟ್ಟಿತ್ತು. ಅವರ ಸಾವಿನಿಂದ ಚಿತ್ರರಂಗಕ್ಕೆ ವಿಶೇಷವಾದ ನಷ್ಟವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ಎಲ್ಲ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿ ಇವರ ಸಾವಿನ ದುಃಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗದವರಿಗೆ ಕೊಡಲಿ ಎಂದು ಪ್ರಾರ್ಥನೆ ಮಾಡಿ, ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಸಭಾಧ್ಯಕ್ಷರೆ, ಈ ಸದನದ ಸದಸ್ಯರಾಗಿ, ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದಂಥ ಹೆಚ್.ಶಿವಪ್ಪನವರು, ಕೆ.ಯಂಕಟಪ್ಪನವರು ಮತ್ತು ಮಹದೇವಪ್ಪ ಶಿವಪ್ಪ ಕಟಗಿ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂಥ ಡಾ: ಬಿ. ಪುಟ್ಟಕಾಮಯ್ಯ, ಆರ್.ಕೆ.ರಾಠೋಡ್ ಮತ್ತು ಎಲ್.ಕೆ.ಚವ್ಹಾಣ್‌ರವರು ಹಾಗೂ ಖ್ಯಾತ ಹಿನ್ನಲೆ ಗಾಯಕ ಡಾ: ಮನ್ನಾ ಡೇ ಮತ್ತು ಚಲನಚಿತ್ರ ನಿರ್ದೇಶಕರಾಗಿದ್ದಂಥ ಡಿ.ರಾಜೇಂದ್ರಬಾಬು ಇವರುಗಳ ಸಂತಾಪ ಸೂಚನಾ ನಿರ್ಣಯವನ್ನು ತಾವು ಮಂಡಿಸಿದ್ದೀರಿ.

ಮೊದನೆಯದಾಗಿ, ಹೆಚ್.ಶಿವಪ್ಪರವರು ಈ ಸದನದಲ್ಲಿ ಸದಸ್ಯರಾಗಿ, ಶಾಸಕರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ವಕೀಲ ವೃತ್ತಿಯನ್ನು ಪ್ರಾರಂಭ ಮಾಡಿ, ನಂತರ ಸಹಕಾರಿ ಕ್ಷೇತ್ರದಲ್ಲಿ ಅವರದ್ದೇ ಆದಂಥ ಕೊಡುಗೆಯನ್ನು ಕೊಟ್ಟಿದ್ದಾರೆ ನಾನು ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಸಹ ಅವರ ಜೊತೆ ನನ್ನ ಸಂಬಂಧ ಹೇಗಿತ್ತು ಎಂದರೆ ನಾನು ಹಲವಾರು ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ ಅವರು ಅತ್ಯಂತ ವಿಶ್ವಾಸದಲ್ಲಿ ನನ್ನನ್ನು ಕಂಡಿದ್ದರು. ಅವರು ಸ್ವಲ್ಪ ಕೋಪಿಷ್ಠರಾಗಿದ್ದರು ಅವರ ಮನಸ್ಸಿಗೆ ಯಾವುದಾದರೂ ಒಂದು ವಿಷಯದಲ್ಲಿ ಅಸಮಾಧಾನವಾದಾಗ, ಅದನ್ನು ನೇರವಾಗಿ ವ್ಯಕ್ತಪಡಿಸುತ್ತಿದ್ದಂಥ ಅವರ ನಿಲುವುಗಳನ್ನು ನಾನು ವೈಯಕ್ತಿಕವಾಗಿ ಕಂಡಿದ್ದೇನೆ. ಇವತ್ತು ಅವರ ಮಗ ಇಲ್ಲಿ ಸದಸ್ಯರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಅವರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದೇನೆ.

ಅದೇ ರೀತಿ, ಕೆ.ಯಂಕಟಪ್ಪರವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅದಕ್ಕೆ ಪೂರ್ವದಲ್ಲಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮುಖ್ಯಮಂತ್ರಿಗಳು ಆಗಲೇ ಹೇಳಿದ ರೀತಿಯಲ್ಲಿ, ಅವರು ಪರಿಶಿಷ್ಟ ವರ್ಗಕ್ಕೆ ಸೇರಿದಂಥ ವ್ಯಕ್ತಿಯಾಗಿದ್ದರೂ, ಚುನಾವಣೆಯಲ್ಲಿ ಆಯ್ಕೆಯಾಗಲು ಇದ್ದಂಥ ಕಷ್ಟಕರವಾದ ಪರಿಸ್ಥಿತಿಯಲ್ಲೂ ಜನರ ಮನಸ್ಸನ್ನು ಗೆದ್ದು ಎರಡು ಬಾರಿ ವಿಧಾನಸಭೆಗೆ ಆಯ್ಕೆಯಾಗಿ, ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಅವರ ಆತ್ಮಕ್ಕೂ ಭಗವಂತ ಶಕ್ತಿಯನ್ನು ಕೊಡಲಿ ಎನ್ನುವ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ.

ಅದೇ ರೀತಿ, ಮತ್ತೊಬ್ಬ ಹಿರಿಯರಾದ ಮಹದೇವಪ್ಪ ಶಿವಪ್ಪ ಕಟಗಿಯವರು ಕುಂದಗೋಳದ ಶಾಸಕರಾಗಿ, ಮಂತ್ರಿಗಳಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಹಲವಾರು ರೀತಿಯ ಸೇವೆಯನ್ನು ಈ ನಾಡಿಗೆ ಕೊಟ್ಟಿದ್ದಾರೆ. ಅವರು ಒಂದು ಬಾರಿ ವಿಧಾನ

ಪರಿಷತ್ತಿಗೂ ಆಯ್ಕೆಯಾಗಿ ಕೆಲಸವನ್ನು ನಿರ್ವಹಿಸಿದ್ದಾರೆ ಅವರ ಆತ್ಮಕ್ಕೂ ಭಗವಂತ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದೇನೆ.

ಅದೇ ರೀತಿ, ಮತ್ತೊಬ್ಬ ಹಿರಿಯರಾದ ಡಾ· ಬಿ.ಪುಟ್ಟಕಾಮಯ್ಯನವರು ವೃತ್ತಿಯಲ್ಲಿ ವೈದ್ಯರಾದರೂ 1972ರಲ್ಲಿ ಚುನಾವಣೆಯಲ್ಲಿ ಆಯ್ಕೆಯಾಗಿ ಐದನೇ ವಿಧಾನ ಸಭೆಯಲ್ಲಿ ಕೆಲಸವನ್ನು ನಿರ್ವಹಿಸಿದ್ದಾರೆ. ಅವರ ಆತ್ಮಕ್ಕೂ ಶಾಂತಿ ಯನ್ನು ಕೋರುತ್ತಿದ್ದೇನೆ.

ಅದೇ ರೀತಿ, ಆರ್.ಕೆ.ರಾಠೋಡ್‌ರವರು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾಗಿ ನಂತರ ವಿಧಾನ ಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. ನನ್ನ ಮತ್ತು ಅವರ ನಡುವೆ ಒಂದು ಆತ್ಮೀಯವಾದಂಥ ಬಾಂಧವ್ಯವಿತ್ತು. ಅದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಾ, ಅವರ ಆತ್ಮಕ್ಕೂ ಭಗವಂತ ಶಾಂತಿಯನ್ನು ಕೊಡಲಿ ಎನ್ನುವ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ.

ಅದೇ ರೀತಿ, ಎಲ್.ಕೆ.ಚವ್ಹಾಣ್‌ರವರು ಹುಲಸೂರು ವಿಧಾನಸಭಾ ಮೀಸಲು ಕ್ಷೇತ್ರದಿಂದ ಹತ್ತನೇ ವಿಧಾನಸಭೆಗೆ ಆಯ್ಕೆಯಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ.

ಅದೇ ರೀತಿ, ಡಾ: ಮನ್ನಾ ಡೇರವರು ಉತ್ತಮವಾದಂಥ ಖ್ಯಾತ ಹಿನ್ನೆಲೆ ಗಾಯಕರಾಗಿ 12 ಭಾಷೆಗಳಲ್ಲಿ ಅವರ ಮಧುರ ಕಂರದ ಗಾಯನ ದಿಂದ ಈ ನಾಡಿನ ಜನರಿಗೆ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡದಲ್ಲೂ ಅವರು ಅತ್ಯುತ್ತಮವಾಗಿ ಹಾಡಿರುವ ಗಾಯನಗಳನ್ನು ಸ್ಮರಿಸಿ ಕೊಳ್ಳುತ್ತಾ, ಅವರು ಪಶ್ಚಿಮ ಬಂಗಾಳದಲ್ಲಿ ಜನಿಸಿದ್ದರೂ, ಅವರು ತಮ್ಮ ಜೀವನದ ಅಂತ್ಯಕಾಲದಲ್ಲಿ ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಿದ್ದರು ಎನ್ನುವುದನ್ನು ಸ್ಮರಿಸಿಕೊಳ್ಳುತ್ತಾ, ಈ ಸಂದರ್ಭದಲ್ಲಿ ಅವರ ಆತ್ಮಕ್ಕೂ ಸಹ ಶಾಂತಿಯನ್ನು ಕೋರಲು ಬಯಸುತ್ತೇನೆ.

ಅದೇ ರೀತಿ, ಡಿ.ರಾಜೇಂದ್ರಬಾಬುರವರು ನನ್ನ ಆತ್ಮೀಯ ಸ್ನೇಹಿತರಾಗಿ ದ್ದರು. ನಾನು ರಾಜಕೀಯ ಕ್ಷೇತ್ರಕ್ಕೆ ಬರುವುದಕ್ಕೆ ಮುಂಚೆ, ಚಲನಚಿತ್ರರಂಗದಲ್ಲಿ

ಚಲನಚಿತ್ರಗಳ ಹಂಚಿಕೆದಾರನಾಗಿ ಕೆಲಸ ನಿರ್ವಹಿಸುವಾಗ ಅವರ ಹಲವಾರು ಚಲನಚಿತ್ರಗಳನ್ನು ಹಂಚಿಕೆಯನ್ನು ಮಾಡಿರುವುದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತೇನೆ. ಅವರು ಕೌಟುಂಬಿಕ ಮತ್ತು ಸಾಂಸಾರಿಕ ಚಿತ್ರಗಳನ್ನು ಚಿತ್ರರಸಿಕರಿಗೆ ಮನಮುಟ್ಟುವ ರೀತಿ ನಿರ್ದೇಶನವನ್ನು ಮಾಡುತ್ತಿದ್ದರು ಹಲವಾರು ವರ್ಷಗಳು ನೆನಪಿನಲ್ಲಿ ಉಳಿಯುವಂಥ ಚಿತ್ರ ಗಳನ್ನು ಅವರು ನಾಡಿಗೆ ಕೊಟ್ಟಿದ್ದಾರೆ. ಅವರ ಆತ್ಮಕ್ಕೂ ಶಾಂತಿಯನ್ನು ಕೋರಿ, ಇವತ್ತು ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ಗೌರವವನ್ನು ಸಲ್ಲಿಸಲು ಬಯಸುತ್ತೇನೆ.

ಶ್ರೀ ಸಂಭಾಜಿ ಲಕ್ಷ್ಮಣ ಪಾಟೀಲ್ (ಬೆಳಗಾವಿ ದಕ್ಷಿಣ). (ಮಾನ್ಯ ಸದಸ್ಯರು ಹಿಂದಿ ಭಾಷೆಯಲ್ಲಿ ಮಾತನಾಡಲು ಪ್ರಾರಂಭಿಸಿದರು).

(ಈ ಹಂತದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಹಲವಾರು ಸದಸ್ಯರು ಒಟ್ಟಿಗೆ ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದರು).

(ಗೊಂದಲ)

ಅಧ್ಯಕ್ಷರು: ಇದು ಸಣ್ಣದು ಬಿಡಿರಿ, ದೊಡ್ಡದು ಬಂದಾಗ ಮಾತನಾಡಿ ಮಹರಾಯರೆ.

(ಗೊಂದಲ)

ಅಧ್ಯಕ್ಷರು: ಎಲ್ಲ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ, ಒಂದೇ ಮಾತಿನಲ್ಲಿ ಹೇಳಿಬಿಡುತ್ತೇನೆ. ಅವರು ಮುಂಚಿತವಾಗಿ ಅವರ ಭಾಷಣವನ್ನು ನಮಗೆ ಬರೆದು ಕೊಡಬೇಕು. ಅವರ ಭಾಷೆಯಲ್ಲಿ ಹೇಳಲು ಅವಕಾಶವಿದೆ. ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡುವ ಪರಿಪಾಠ ಬಂದಿಲ್ಲವೇ?ಅದೇ ರೀತಿ, ಅವರು ಮೊದಲು ಬರೆದು ಕೊಡಬೇಕಾಗಿತ್ತು.ಆದರೆ ಬರೆದು ಕೊಟ್ಟಿಲ್ಲ, ಹಾಗೇ ಹೇಳುತ್ತಿದ್ದಾರೆ. ಅದರಂತೆ ಅವಕಾಶ ಮಾಡಿಕೊಡಿ. ಸೌಜನ್ಯವಿರಬೇಕು, ಅಣ್ಣತಮ್ಮಂದಿರಾಗಿ ನಾವು ಬಾಳ್ವೆ ಮಾಡಬೇಕಲ್ಲವೇ? ಆದ್ದರಿಂದ ವಿಚಾರ ಮಾಡಿ, ದಯವಿಟ್ಟು ಸಹಕರಿಸಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅವರು Parliament ಗೆ ಹೋಗಲಿ. ಅಲ್ಲಿ ಮಾತನಾಡಲಿ.

ಅಧ್ಯಕ್ಷರು: Hindi Reporter ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಅವರು ಕರ್ನಾಟಕದಲ್ಲಿ ಕನ್ನಡ ಕಲಿಯಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿ ಮಾತ ನಾಡುವುದನ್ನು ಅವರು ಕಲಿಯಬೇಕು. ನಾವು ಮರಾಠಿಯಲ್ಲಿ ಮಾತನಾಡು ತ್ತೇವೆ ಎನ್ನುವ ಹಠ ಅವರಿಗೆ ಬೇಡ. ಸಂವಿಧಾನ ಬದ್ಧವಾಗಿ ಹಕ್ಕಿದೆ. ಆದರೆ, ಕನ್ನಡದಲ್ಲಿ ಮಾತನಾಡುವಂಥದ್ದಾಗಬೇಕು.

(ಈ ಹಂತದಲ್ಲಿ MES ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಉಮೇಶ್ ವಿ.ಕತ್ತಿ: ಅವರಿಬ್ಬರಿಗೂ ಕನ್ನಡ ಬರುತ್ತದೆ ಬೇಕಂತಲೇ ಮಾತನಾಡುತ್ತಿದ್ದಾರೆ. ಕನ್ನಡನಾಡಿನ ಸುಪುತ್ರರಿವರು. ಕನ್ನಡ ಬಂದೇ ಬರುತ್ತದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಭಾಷೆ ಭಾಷೆಗಳ ಮಧ್ಯೆ ಬಾಂಧವ್ಯವಿರಬೇಕು. ಆದರೆ, ಭಾಷೆಗಳನ್ನು ಬೇರೆ ರಾಜಕೀಯ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದಕ್ಕೆ ಅವಕಾಶವಾಗಬಾರದು. ಭಾಷೆಗಳನ್ನು ಈ ರೀತಿ ಸ್ವಾರ್ಥಕ್ಕೆ ಬಳಸಿಕೊಳ್ಳುವುದಕ್ಕೆ ಕಾರಣವಾಗಬಾರದು.

ಅಧ್ಯಕ್ಷರು: ಜಗದೀಶ್ ಶೆಟ್ಟರ್‌ರವರೆ, ನಿಮ್ಮstatement ಏನು? ಏನು ಮಾಡುವುದು ದೇಶ ಹಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕರ್ನಾಟಕದಲ್ಲಿದ್ದ ಮೇಲೆ ಭಾಷೆಯನ್ನು ಕಲಿತು ಅದರಲ್ಲಿ ಮಾತನಾಡಬೇಕು.

ಅಧ್ಯಕ್ಷರು: ಹಲವಾರು ಜಾತಿ, ಹಲವಾರು ಭಾಷೆ, ಈ ದೇಶದ ವ್ಯವಸ್ಥೆ ಹಾಗಿದೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಮಾತೃ ಭಾಷೆ ಆಡಲಿ. ಮಾತೃ ಭಾಷೆಗೆ ಅದರದೇ ಆದ ಗೌರವವಿದೆ. ಆದರೆ, ನಾಡಿನ ಭಾಷೆ ಕನ್ನಡ ಇದೆ ಅಧ್ಯಕ್ಷರೆ, ಅದಕ್ಕೆ ಪ್ರಾಮುಖ್ಯತೆ ಸಿಗಬೇಕು. ತಾವು ಸೂಚನೆ ಕೊಡಬೇಕು. ಅವರು ಕರ್ನಾಟಕದಲ್ಲಿದ್ದು, ಕನ್ನಡ ಕಲಿತು ಕನ್ನಡದಲ್ಲಿ ಮಾತನಾಡಬೇಕು. ಅವರ ಮಾತೃಭಾಷೆಗೆ ಅವರ ಗೌರವ ಇರಲಿ ಮಾತೃ ಭಾಷೆಯನ್ನು ಮನೆಯಲ್ಲಿ ಆಡಿಕೊಳ್ಳಲಿ. ಆದರೆ, ಜನತೆಯ ಮಧ್ಯೆ ಆಡುವಾಗ ಕನ್ನಡ ಕಲಿತು ಕನ್ನಡ ಮಾತನಾಡುವುದಕ್ಕೆ ತಾವೂ ಸೂಚನೆಯನ್ನು ಕೊಡಬೇಕು.

ಅಧ್ಯಕ್ಷರು: ಆಯಿತು. ಶೆಟ್ಟರ್‌ರವರೆ, ಹೇಳಿ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಧಾರವಾಡ ಕೇಂದ್ರ): ಸನ್ಮಾನ್ಯ ಅಧ್ಯಕ್ಷರೆ, ತಾವೇನು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ. ಕೆಲವು ಪ್ರಮುಖರು, ಮಾಜಿ ಶಾಸಕರು ಮತ್ತು ಹಿರಿಯರು ನಮ್ಮನ್ನಗಲಿದ್ದಾರೆ. ಅವರಿಗೆ ಸಂತಾಪ ಸೂಚಿಸುವ ಸೂಚನೆ ಇದು. ಮಾನ್ಯ ಹೆಚ್. ಶಿವಪ್ಪರವರು ಈ ಸದನದಲ್ಲಿ ಕೆಲಸ ಮಾಡಿದ್ದವರು, ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದ್ದವರು ಮತ್ತು ನ್ಯಾಯವಾದಿಯಾಗಿ ಕೆಲಸ ಮಾಡಿದ್ದವರು ಶಿವಪ್ಪರವರು ಹೋರಾಟಗಾರರಾಗಿದ್ದರು. ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಬಹಳ ಜಿದ್ದಿನಿಂದ ಕೆಲಸ ಮಾಡುವಂಥವರು ಶಿವಪ್ಪರವರು. ಹೀಗಾಗಿ ಅವರು ಅಲ್ಪ ಅವಧಿಯಲ್ಲಿ ಶಾಸಕರಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಸಹ ತಮ್ಮ ಹೋರಾಟದ ಮನೋಭಾವದಿಂದ ಸಾಕಷ್ಟು ಇಂಥ ಭಾಗದ ಅಭಿವೃದ್ಧಿಗೆ ಮತ್ತು ಜನಪರವಾದ ಕೆಲಸಕ್ಕೆ ಹೆಸರುವಾಸಿಯಾಗಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ, ಕೆ.ಯಂಕಟಪ್ಪನವರು, ಡಾ:ಬಿ. ಪುಟ್ಟಕಾಮಯ್ಯರವರು. ಆರ್.ಕೆ. ರಾರೋಡ್‌ರವರು ಜಿಲ್ಲಾ ಪಂಚಾಯಿತಿಯ

ಅಧ್ಯಕ್ಷರಾಗಿ ಅಂದರೆ ಕೆಳಹಂತದ ರಾಜಕಾರಣದಿಂದ ಶಾಸಕರಾಗಿ ಕೆಲಸ ಮಾಡಿದಂಥವರು. ಅದೇರೀತಿ, ಎಲ್.ಕೆ.ಚವ್ಹಾಣರವರು 1994ರಲ್ಲಿ ಹುಲ ಸೂರು ಮೀಸಲು ವಿಧಾನಸಭಾ ಕ್ಷೇತ್ರದಿಂದ ಭಾರತೀಯ ಜನತಾ ಪಾರ್ಟಿ ಯಿಂದ ಶಾಸಕರಾಗಿ ಆಯ್ಕೆಯಾಗಿದ್ದಂಥವರು. ಚವ್ಹಾಣರವರು ಆ ಭಾಗದ ಅಭಿವೃದ್ಧಿಗೆ, ಆ ಭಾಗದ ಜನಸಾಮಾನ್ಯರು ಅದರಲ್ಲೂ ಶೋಷಿತ ಜನಾಂಗದ ಬಗ್ಗೆ ಹೆಚ್ಚು ಕಳಕಳಿ ಇದ್ದವರು. ಅವರು ಇವತ್ತು ನಮ್ಮ ಮಧ್ಯದಲ್ಲಿಲ್ಲ ಎಂ.ಎಸ್.ಕಟಗಿಯವರು ಧಾರವಾಡ ಜಿಲ್ಲೆಯ ಕುಂದಗೋಳ ಕ್ಷೇತ್ರದಿಂದ ಆರಿಸಿ ಬಂದಂಥ ವ್ಯಕ್ತಿ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿ ಮಾಡಿದಂಥವರು. ಕೆಲವು ತಿಂಗಳುಗಳ ಕಾಲ ಅವರು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾಗಿ ಕೆಲಸಮಾಡಿದವರು. ವಿಶೇಷವಾಗಿ ಎಂ.ಎಸ್. ಕಟಗಿಯವರ ಬಗ್ಗೆ ಹೇಳುವುದಾದರೆ, ಅವರು ಸಂಗೀತ ಪ್ರೇಮಿಗಳಾಗಿದ್ದರು. ಎಂ.ಎಸ್ ಕಟಗಿಯವರು ಸಂಗೀತದ ಬಗ್ಗೆ ಹೆಚ್ಚು ಆಸಕ್ತಿ ಇದ್ದವರು. ಕುಂದಗೋಳದಲ್ಲಿ ಸವಾಯಿ ಗಂಧರ್ವರವರ ಹೆಸರಿನಲ್ಲಿ ಪ್ರತಿವರ್ಷ ಸಂಗೀತ ಗೋಷ್ಠಿಯನ್ನು ತಪ್ಪದೆ ಮಾಡಿಕೊಂಡು ಬಂದಂಥವರು ಎಂ.ಎಸ್. ಕಟಗಿ ಯವರು. ಸಂಗೀತ ಕ್ಷೇತ್ರಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡುವಂಥ ಕೆಲಸ ಮಾಡುತ್ತಿದ್ದರು. ಹಾಗಾಗಿ ನಾನು ವಿಶೇಷವಾಗಿ ಅವರ ಬಗ್ಗೆ ನೆನಪು ಮಾಡಿಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಡಾ: ಮನ್ನಾ ಡೇ ಅವರು West Bengal ನವರಾಗಿದ್ದರು. ಅವರು ಹಿಂದಿ ಚಲನಚಿತ್ರರಂಗದಲ್ಲಿ ಒಬ್ಬ ಹಾಡುಗಾರರಾಗಿ ಇಡೀ ಆ ಭಾಗದ ಜನ ಮಾನಸದಲ್ಲಿ ಪ್ರಸಿದ್ಧ ಹಾಡುಗಾರರಾಗಿ ಮತ್ತೆ ಅದರಲ್ಲಿ ಭಾವನಾತ್ಮಕವಾದಂಥ ಹಾಡುಗಳನ್ನು ಜನಮಾನಸದಲ್ಲಿ ಉಳಿಸಿಕೊಂಡು ಬಂದಂಥವರು ಮನ್ನಾ ಡೇ ಯವರು. ಹೀಗಾಗಿ ಅವರು ತಮ್ಮ ಜೀವಿತಾವಧಿಯಲ್ಲಿ ಹೆಚ್ಚಿನ ಸಮಯ ಬೆಂಗಳೂರಿನಲ್ಲಿಯೇ ಕಳೆದಂಥವರು. ಇವತ್ತು ಮನ್ನಾ ಡೇ ಎಂದಕೂಡಲೆ ಆ ಹಾಡಿಗೆ, ಸಂಗೀತಕ್ಕೆ ಮತ್ತೊಂದು ಹೆಸರು ಎನ್ನುವ ರೀತಿಯಲ್ಲಿ ಮನ್ನಾ ಡೇ ಯವರು ಎಂದಕೂಡಲೆ ಆ ಹಾಡಿಗೆ, ಸಂಗೀತಕ್ಕೆ ಮತ್ತೊಂದು ಹೆಸರು ಎನ್ನುವ ರೀತಿಯಲ್ಲಿ ಮನ್ನಾ ಡೇ ಯವರು ಪ್ರಸಿದ್ಧರಾಗಿದ್ದರು ಎನ್ನುವುದನ್ನು

ಈ ಸಂದರ್ಭದಲ್ಲಿ ನಾವು ನೆನಪು ಮಾಡಿಕೊಳ್ಳಬೇಕಗುತ್ತದೆ ಇನ್ನು ಡಿ.ರಾಜೇಂದ್ರಬಾಬುರವರು ಚಲನಚಿತ್ರ ರಂಗದ ನಿರ್ದೇಶಕರಾಗಿ ಮತ್ತು ಹಲ ವಾರು ಉತ್ತಮವಾದ ಚಲನಚಿತ್ರಗಳನ್ನು ನಿರ್ದೇಶನ ಮಾಡಿದವರು ಈ ರೀತಿ ಪ್ರಮುಖರು ಇವತ್ತು ನಮ್ಮ ಮಧ್ಯೆ ಇಲ್ಲ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಅಗಲಿ ಹೋದ ಈ ಎಲ್ಲಾ ಮಹನೀಯರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯನ್ನು ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥನೆ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರಿ ತಮ್ಮ ಈ ಸಂತಾಪ ಸೂಚನೆ ನಿರ್ಣಯಕ್ಕೆ ಬೆಂಬಲ ಸೂಚಿಸಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ(ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ಹೆಚ್.ಶಿವಪ್ಪನವರು ಮಾಜಿ ಸಚಿವರಾಗಿ ನಮ್ಮ ಪಕ್ಕದ ಹರಿಹರ ತಾಲ್ಲೂಕಿನಲ್ಲಿ ತಮ್ಮದೇ ಆದಂಥ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿದ್ದರು. ನ್ಯಾಯವಾದಿ ಗಳಾಗಿ, ಸಚಿವರಾಗಿ ಆ ಭಾಗದ ಜನಪ್ರೀತಿಯನ್ನು ಹೊಂದಿದ್ದ ಒಬ್ಬ ನಾಯಕ ನನ್ನು ಕಳೆದುಕೊಂಡು ನಾವು ಬಡವಾಗಿದ್ದೇವೆ. ಶ್ರೀ ಕೆ.ಯಂಕಟಪ್ಪನವರು ಶಿಕಾರಿಪುರ ತಾಲ್ಲೂಕನ್ನು ಪ್ರತಿನಿಧಿಸುತ್ತಾ, ಸಚಿವರಾಗಿ ಕೆಲಸ ಮಾಡಿದ್ದರು. ಆ ಕ್ಷೇತ್ರದ ಅಭಿವೃದ್ಧಿಗೆ, ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಒಳ್ಳೆಯ ಕೆಲಸ ಮಾಡಿದ ಯಂಕಟಪ್ಪರವರನ್ನು ನಾವು ಕಳೆದುಕೊಂಡಿದ್ದೇವೆ. ಮಹದೇವಪ್ಪ ಶಿವಪ್ಪ ಕಟಗಿಯವರು, ವಿಧಾನಸಭಾ ಮಾಜಿ ಸದಸ್ಯರಾದಡಾ:ಬಿ. ಪುಟ್ಟಕಾಮಯ್ಯನ ವರು, ಆರ್.ಕೆ.ರಾಠೋಡ್‌ರವರು, ಎಲ್.ಕೆ.ಚವ್ಹಾಣರವರು ಇವರೆಲ್ಲರನ್ನೂ ಕಳೆದುಕೊಂಡು ಈ ನಾಡು ಬಡವಾಗಿದೆ. ಅವರ ಆತ್ಮಕ್ಕೆ ನಾನು ಶಾಂತಿ ಕೋರುತ್ತಿದ್ದೇನೆ. ಖ್ಯಾತ ಹಿನ್ನೆಲೆ ಗಾಯಕರಾದ ಡಾ: ಮನ್ನಾ ಡೇ ರವರು ತಮ್ಮ ಕೊನೆಯ ದಿವಸಗಳನ್ನು ಬೆಂಗಳೂರಿನಲ್ಲಿ ಕಳೆದರು. ಇಡೀ ದೇಶದಲ್ಲಿಯೇ ಅವರ ಸಾಧನೆ ಬಹಳಷ್ಟು ಇದೆ. ಸಂಗೀತ ಕ್ಷೇತ್ರದಲ್ಲಿ ಅಪಾರ ಆಸಕ್ತಿ ಹೊಂದಿ ಉಸ್ತಾದ್ ದಬೀರ್ ಖಾನ್ ಅವರಿಂದ ಸಂಗೀತಾಭ್ಯಾಸ ಮಾಡಿದ ಡೇ ಅವರು ತಮ್ಮನ್ನು ತಾವು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. ಅವರ ಕೊನೆಯ ದಿವಸಗಳಲ್ಲಿ ಅವರು ಬೆಂಗಳೂರಿನಲ್ಲಿ ಇದ್ದು ಕೊನೆ

ಯುಸಿರೆಳೆದರು ಎನ್ನುವುದು ನೋಡಿದರೆ ನಿಜಕ್ಕೂ ಅವರ ಮಹತ್ವ ತಮಗೆ ಗೊತ್ತಾಗಲಿಲ್ಲ. ಅವರು ತೀರಿಕೊಂಡ ಮೇಲೆ, ಬೆಂಗಳೂರಿನಲ್ಲಿ, ಇಡೀ ದೇಶದಲ್ಲಿ ಅವರ ಬಗ್ಗೆ ಮೆಚ್ಚುಗೆ ಮಾತು ಬಂದಂಥದ್ದು ಇದೆ 12 ಭಾಷೆಗಳಲ್ಲಿ ಒಟ್ಟು 3863 ಗೀತೆಗಳನ್ನು ಹಾಡಿದ್ದರು. ಬಹಳ ಮುಖ್ಯವಾಗಿ ಕನ್ನಡದ ಸಂಗೀತಕ್ಕೆ ಅಪಾರವಾದ ಕೊಡುಗೆ ಕೊಟ್ಟಿದ್ದರು. ಡಿ.ರಾಜೇಂದ್ರ ಬಾಬುರವರು ಚಲನಚಿತ್ರ ಕ್ಷೇತ್ರದಲ್ಲಿ ತಮ್ಮದೇ ಆದಂಥ ಸಾಧನೆಯನ್ನು ಮಾಡಿ ನಿರ್ದೇಶಕರಾಗಿ ಸುಮಾರು 50ಕ್ಕೂ ಹೆಚ್ಚು ಚಲನಚಿತ್ರಗಳನ್ನು ನಿರ್ದೇಶಿಸಿದ್ದರು

ಇಂಥ ಹಿರಿಯ ವ್ಯಕ್ತಿಗಳನ್ನು ಕಳೆದುಕೊಂಡು ಈ ನಾಡು ಬಡವಾಗಿದೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ, ಅವರ ಕುಟುಂಬ ವರ್ಗದವರಿಗೆ ಇದನ್ನು ತಡೆದುಕೊಳ್ಳುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ ಈ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲ ಸೂಚಿಸಿ, ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)

ಅಧ್ಯಕ್ಷರು: ಸದನವು ಅಂಗೀಕರಿಸಿದ ಸಂತಾಪ ಸೂಚನೆ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

3. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ: ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.